# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 657
ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
ಉತ್ತರಿಸುವ ದಿನಾಂಕ : 17.09.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ಕೊಳವೆ ಬಾವಿ ಕೊರೆಸಿ ಕೊಡಲಾಗುವುದು ಎಂದು ಮೋಸ ಮಾಡುವ ಮೂಲಕ 4.5 ಕೋಟಿಗಿಂತಲೂ ಹೆಚ್ಚಿನ ಮೊತ್ತವನ್ನು ವಸೂಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ |
| ಆ) | ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಕಳೆದ ಎರಡು ಆರ್ಥಿಕ ವರ್ಷಗಳ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಎಷ್ಟು ಕೊಳವೆ ಬಾವಿಯನ್ನು ಕೊರೆಸಲಾಗಿದೆ; ಒಂದು ಕೊಳವೆ ಬಾವಿಗೆ ತಗಲುವ ವೆಚ್ಚ ಎಷ್ಟು; (ವಿವರದೊಂದಿಗೆ ಮಾಹಿತಿ ನೀಡುವುದು) | **<u>ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ:</u>**<br><br>ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಗುಬ್ಬಿ ವಿಧಾನ ಸಭಾ ಕ್ಷೇತ್ರದಲ್ಲಿ ಹಿಂದಿನ ಸಾಲಿನ ಗುರಿಯ ಕೊಳವೆಬಾವಿಗಳು ಒಳಗೊಂಡಂತೆ ಒಟ್ಟು 20 ಕೊಳವೆಬಾವಿಗಳನ್ನು ಕೊರೆಸಲಾಗಿದೆ. ವಿವರ ಇಂತಿದೆ:<br><br>ಕ್ರ.ಸಂ. / ವರ್ಷ / ಕೊರೆಸಲಾದ ಕೊಳವೆಬಾವಿಗಳ ಸಂಖ್ಯೆ<br>01 / 2019-20 / 0<br>02 / 2020-21 / 20<br>ಒಟ್ಟು / 20<br><br>**<u>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ:</u>**<br><br>ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಪಂಗಡದವರಿಗೆ ಕೊಳವೆಬಾವಿಗಳನ್ನು ಕೊರೆದಿರುವುದಿಲ್ಲ.<br><br>**ಪ್ರತಿ ಕೊಳವೆಬಾವಿಗೆ ರೂ 4.50 ಲಕ್ಷಗಳ ಘಟಕ ವೆಚ್ಚ ನಿಗಧಿಪಡಿಸಲಾಗಿದೆ. ಇದರಲ್ಲಿ ರೂ. 4.00 ಲಕ್ಷಗಳ ಸಹಾಯಧನ ಇದ್ದು, ಈ ಪೈಕಿ ರೂ. 0.50 ಲಕ್ಷಗಳನ್ನು ವಿದ್ಯುದ್ದೀಕರಣ ಸಲುವಾಗಿ ಎಸ್ಕಾಂಗಳಿಗೆ ಪಾವತಿಸಲಾಗುವುದು. ಹಾಗೂ ರೂ. 0.50 ಲಕ್ಷಗಳ ಅವಧಿಸಾಲ ಇರುತ್ತದೆ.** |

Inner table in answer (ಆ):

| ಕ್ರ.ಸಂ. | ವರ್ಷ | ಕೊರೆಸಲಾದ ಕೊಳವೆಬಾವಿಗಳ ಸಂಖ್ಯೆ |
|---|---|---|
| 01 | 2019-20 | 0 |
| 02 | 2020-21 | 20 |
| ಒಟ್ಟು | | 20 |

| | | |
|---|---|---|
| ಇ) | ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕೊಳವೆ ಬಾವಿ ಕೊರೆಸುವ ಕಾರ್ಯಾದೇಶವನ್ನು ಬಡವರಿಗೆ ತೋರಿಸಿ ಪ್ರತಿಯೊರ್ವ ಫಲಾನುಭವಿಯಿಂದ 1 ಲಕ್ಷದ 50 ಸಾವಿರ ಪಡೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಫಲಾನುಭವಿಯಿಂದ ಸರ್ಕಾರ ಎಷ್ಟು ಮೊತ್ತವನ್ನು ಪಡೆದುಕೊಳ್ಳುತ್ತದೆ? (ಒದಗಿಸುವುದು) | ಬಂದಿಲ್ಲ.<br><br>ಈ ಯೋಜನೆಯು ಸರ್ಕಾರದ ಒಂದು ಪ್ರತಿಷ್ಠಿತ ಉಚಿತ ಯೋಜನೆಯಾಗಿರುತ್ತದೆ. ಫಲಾಪೇಕ್ಷಿಗಳು ಸೌಲಭ್ಯವನ್ನು ಪಡೆಯಲು ಯಾವುದೇ ರೀತಿಯ ಹಣ ಪಾವತಿಸುವ ಅವಶ್ಯಕತೆ ಇರುವುದಿಲ್ಲ. |

**ಸಂಖ್ಯೆ: ಸಕಇ 432 ಎಸ್‌ಡಿಸಿ 2021**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.